## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 1081/2024

**ಸಾಕ್ಷಿಯನ್ನು ದಿಃ 27.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಸಿ ಬಿ ಜಾನಕಿ | ಸಿಡಬ್ಲ್ಯೂ6 | ಪಿಡಬ್ಲ್ಯೂಃ 6 |
| ಗಂಡನ ಹೆಸರು | ಲೇಟ್ ಸಿದ್ದೇಗೌಡ | | |
| ವಯಸ್ಸು | 62 ವರ್ಷ | | |
| ಕೆಲಸ | ಅಂಗನವಾಡಿ ಶಿಕ್ಷಕಿ. | | |
| ವಾಸಸ್ಥಳ | ಮಂಜುನಾಥ ಬಡಾವಣೆ. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–1 ಗೊತ್ತು. ಸುಮಾರು 2 ವರ್ಷದ ಹಿಂದೆ ನಾನು ಮೈಸೂರಿಗೆ ಹೋಗಿದ್ದೆ. ನಾನು ಮೈಸೂರಿನ ರಾಮಸ್ವಾಮಿ ಸರ್ಕಲ್ ನಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ನ್ನು ಬೆಳಿಗ್ಗೆ 9.30 ಗಂಟೆಗೆ ಹತ್ತಿದೆ. ಅದೇ ಬಸ್ಸಿನಲ್ಲಿ ಚಾಸಾ–1 ರವರು ಕೂಡ ಇದ್ದರು. ಬೆಳಿಗ್ಗೆ ಸುಮಾರು 10.30 ಗಂಟೆಗೆ ಬಸ್ ಹುಣಸೂರು ಬಸ್ ನಿಲ್ದಾಣಕ್ಕೆ ಬಂತು. ಬಸ್ ನಿಲ್ದಾಣಕ್ಕೆ ಬಂದಾಗ ಬಸ್ಸಿನ ನಿರ್ವಾಹಕರು ಪ್ರಯಾಣಿಕರನ್ನು ಬೇಗ ಇಳಿಯಿರಿ ಎಂದು ಹೇಳಿದರು. ಬಸ್ ನಿಲ್ದಾಣದ ಒಳಗೆ ಬಂದು ಪ್ಲಾಟ್ ಫಾರಂ ಗೆ ಹೊಗದೇ ಬದಿಯಲ್ಲಿ ನಿಂತಿತು. ನಾನು ಮೊದಲು ಇಳಿದೆ. ನನ್ನ ಹಿಂದೆ ಚಾಸಾ–1 ರವರು ಇದ್ದರು. ಚಾಸಾ–1 ರವರು ಬಸ್ಸಿನಿಂದ ಇಳಿಯಲೆಂದು ಒಂದದು ಕಾಲನ್ನು ಬಸ್ಸಿನ ಮೆಟ್ಟಿಲಿನ ಮೇಲೆ ಒಂದು ಕಾಲನ್ನು ನೆಲದಲ್ಲಿ ಇಡುವಷ್ಟರಲ್ಲಿ ಬಸ್ ಮುಂದಕ್ಕೆ ಚಲಿಸಿತ್ತು. ಬಸ್ ಚಾಲಕ ಬಸ್ ನ್ನು ವೇಗವಾಗಿ ಮುಂದಕ್ಕೆ ಚಲಾಯಿಸಿದರು. ಆಗ ಚಾಸಾ–1 ರವರು ತಿರು ತಿರುಗಿ ಬಿದ್ದರು. ಅವರ ತಲೆಗೆ ಏಟಾಯಿತು. ನನ್ನ ಬ್ಯಾಗಿನಲ್ಲಿದ್ದ ನೀರನ್ನು ನೀಡಿ ಅವರನ್ನು ಉಪಚರಿಸಿದೆ. ಅಲ್ಲಿದ್ದ ಸಾರ್ವಜನಿಕರು ಒಂದು ಆಟೋವನ್ನು ತರಿಸಿದರು. ಅದರಲ್ಲಿ ನಾನು ಚಾಸಾ–1 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋದೆ. ನಂತರ ನಾನು ಚಾಸಾ–1 ರವರ ಮಗನಿಗೆ ಫೋನ್ ಮಾಡಿದೆ. ಅವರು ಬಂದು ಚಾಸಾ–1 ರವರನ್ನು ಮೈಸೂರಿಗೆ ಕರೆದುಕೊಂಡು ಹೋದರು. ಚಾಸಾ–1 ರವರಿಗೆ ಏಟಾಗಲು ಬಸ್ ಚಾಲಕನ ವೇಗದ ಚಾಲನೆಯೇ

ಕಾರಣವಾಗಿದೆ. ಆ ದಿನ ಬಸ್ ಚಾಲಕ ಯಾರೆಂದು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>**

ದಿನಾಂಕಃ 24.07.2024 ರಂದು ಬಸಿನಲ್ಲಿ ಪ್ರಯಾಣಿಸುತ್ತಿದ್ದೆ ಎಂದರೆ ಸರಿ. ಬಸ್ ಸಂಖ್ಯೆ ಕೆ ಎ 09 ಎಫ್ 5319 ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿಯೇ ಬಸ್ ನ್ನು ಚಲಾಯಿಸುತ್ತಿದ್ದರು ಎಂದರೆ ಸರಿ. ಬಸವರಾಜು ಎನ್ನುವವರು ನಿರ್ವಾಹಕರಾಗಿದ್ದರು ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ ಆದರೂ ಕೂಡ ಆರೋಪಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಪರ ಶ್ರೀಎನ್ ಎನ್ ಪರ ಶ್ರೀ ಎಸ್ ಎಸ್ ವಕೀಲರಿಂದಃ</u>**

ಚಾಸಾ-1 ನನಗೆ ಪರಿಚಯಸ್ಥರು. ನಾನು ಚಾಸಾ-1 ರವರು ಹೇಳಿದ್ದಕ್ಕೆ ಬಂದಿದ್ದೇನೆ. ಚಾಸಾ-1 ರವರಿಗೆ ಅನುಕೂಲವಾಗಲೀ ಎಂದು ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಸಾಮಾನ್ಯವಾಗಿ ಬಸ್ ನಿಲ್ದಾಣದ ಒಳಗೆ ಬಸ್ಸಿನ ವೇಗ ಕಡಿಮೆ ಇರುತ್ತದೆ ಎಂದರೆ ಇರಬಹುದು. ಸಾಕ್ಷಿಯು ಮುಂದುವರೆದು ಆರೋಪಿ ಬೇಗ ಹೋಗಬೇಕೆಂದು ವೇಗವಾಗಿ ಚಲಾಯಿಸಿದರು. ಚಾಸಾ-1 ರವರಿಗೆ ಪರಿಹಾರ ಸಿಗಲಿ ಎಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಅಜಾಗರೂಕತೆಯಿಂದ ಘಟನೆ ನಡೆದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.